ಶ್ರೀ ಜೆ.ಹೆಚ್. ಪಟೇಲ್.— ಮಾನ್ಯ ಅಧ್ಯಕ್ಷರೇ, ಕರ್ನಾಟಕ ಪವರ್ ಕಾರ್ಪೊರೇಷನ್‌ನ ಕೆಲವು ನೌಕರರು ಮುಷ್ಕರ ಹೂಡಿ ಧರಣಿ ಸತ್ಯಾಗ್ರಹ ಮಾಡುತ್ತಿರುವುದು ಸರ್ಕಾರದ ಗಮನಕ್ಕೂ ಬಂದಿದೆ. ಅವರ ಬೇಡಿಕೆಗಳ ಬಗ್ಗೆ ಪವರ್ ಕಾರ್ಪೊರೇಷನ್‌ನ ಉನ್ನತ ಅಧಿಕಾರಿಗಳೊಡನೆ ಚರ್ಚೆ ಮಾಡಿ, ಅವರ ಬೇಡಿಕೆಗಳಲ್ಲಿ, ಕೆಲವನ್ನು ತತ್‌ಕ್ಷಣ ಈಡೇರಿಸುವುದಕ್ಕೆ ಸಾಧ್ಯ, ಆ ಬೇಡಿಕೆಗಳನ್ನು ಈಡೇರಿಸಿ ಅಂತ ಪವರ್ ಕಾರ್ಪೊರೇಷನ್‌ನ ಮ್ಯಾನೇಜಿಂಗ್ ಡೈರೆಕ್ಟರ್‌ರವರಿಗೆ ಹೇಳಲಾಗಿದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಮೈಕೇಲ್ ಫರ್ನಾಂಡಿಸ್‌ರವರನ್ನು ಈ ಸಂದರ್ಭದಲ್ಲಿ ಕೇಳಿಕೊಳ್ಳುವುದೇನೆಂದರೆ, ಯಾವ ಜನ ಇವತ್ತು ಧರಣಿ ಸತ್ಯಾಗ್ರಹ ಕುಳಿತಿದ್ದಾರೆ, ಅವರು ಮಾಡುವಂತಹ ಕೆಲಸ ಎಷ್ಟು ಪ್ರಾಮುಖ್ಯವಾದುದೆಂದರೆ, ಇವತ್ತು ಕೆಟ್ಟು ಹೋಗಿರತಕ್ಕ ಎರಡು ಜನರೇಟರ್‌ಗಳನ್ನು ರಿಪೇರಿ ಮಾಡುವಂತವರು ಇವರೇ. ಅಂತವರನ್ನು ಇಲ್ಲಿ ಕೂರಿಸಿಕೊಂಡಿರುವುದು ಸರಿಯಾದುದಲ್ಲ. ಒಂದೊಂದು ಹಂತದಲ್ಲೂ ನಾವು ಬಹಳ ಕಷ್ಟದಲ್ಲಿದ್ದೇವೆ. ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಇವತ್ತು ಅವರ ಧರಣಿಯನ್ನು ನಿಲ್ಲಿಸಿಬಿಟ್ಟು, ಅವರ ಬೇಡಿಕೆ ಏನು ಇದೆ, ಅದನ್ನು ಸರ್ಕಾರ, ಮ್ಯಾನೇಜ್‌ಮೆಂಟ್ ಮತ್ತು ಕಾರ್ಮಿಕರ ಮುಂದಾಳುಗಳು, ಈ ಮೂವರೂ ಕುಳಿತುಕೊಂಡು ಚರ್ಚೆ ಮಾಡಿ ತೀರ್ಮಾನ ಮಾಡೋಣ. ದಯಮಾಡಿ ಇವತ್ತೇ ಕೆಲಸ ಮಾಡತಕ್ಕವರನ್ನೆಲ್ಲಾ ವಾಪಸ್ಸು ಜನರೇಟಿಂಗ್ ಸ್ಟೇಷನ್‌ಗೆ ಕಳುಹಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಮೈಕೇಲ್ ಫರ್ನಾಂಡಿಸ್.—ಇವತ್ತು ಅಲ್ಲಿ ಧರಣಿ ಸತ್ಯಾಗ್ರಹ ಮಾಡುತ್ತಿರತಕ್ಕಂತಹವರು, ಒಂದೇ ಜಾಗದಿಂದ ಬಂದಿರತಕ್ಕಂತಹವರೇನಲ್ಲ. ಇಡೀ ರಾಜ್ಯದಿಂದ ಬಂದಿದ್ದಾರೆ

ಶ್ರೀ ಜೆ.ಹೆಚ್. ಪಟೇಲ್.— ಅಲ್ಲಿ ಕೆಲಸ ಮಾಡುವವರನ್ನಾದರೂ ಕಳುಹಿಸಿಕೊಡಿ.

(iii) ವಿಷಯ : ಕಾರವಾರದ ಕೇಶವ ಗಜಾನನ ಸಬ್ಸಿಸ್ ಕಲಾ ಕಾಲೇಜಿನ ನೌಕರರನ್ನು ಸರಕಾರಿ ನೌಕರರೆಂದು ಪರಿಗಣಿಸುವ ವಿಚಾರ.

ಶ್ರೀ ಪಿ.ಎಸ್. ರಾಣೆ. — ಮಾನ್ಯ ಅಧ್ಯಕ್ಷರೇ, ಕಾರವಾರದಲ್ಲಿರುವ ಕೇಶವ ಗಜಾನನ ಸಬ್ಸಿಸ್ ಕಲಾ ಕಾಲೇಜನ್ನು 1971ರಲ್ಲಿ ಸರ್ಕಾರವು ತನ್ನ ವಶಕ್ಕೆ ತೆಗೆದುಕೊಂಡಿದೆ. ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡ ನಂತರ ಆ ಖಾಸಗಿ ಕಾಲೇಜಿನಲ್ಲಿ ಕೆಲಸ ಮಾಡುತ್ತಿರತಕ್ಕಂತಹ ನೌಕರರನ್ನೂ ಸಹ ಸರ್ಕಾರಿ ನೌಕರರೆಂದು ಪರಿಗಣಿಸಬೇಕು ಎನ್ನುವ ಬಗ್ಗೆ ಸರ್ಕಾರ ಒಪ್ಪಿಕೊಂಡಿತ್ತು. ಆಲ್ಲದೆ ಆವರಿಗೆ ಹಿಂದಿನ ಒಂದು ವರ್ಷದ ಸಂಬಳ ಸಾರಿಗೆ ಪೂರ್ತಿ ಕೊಡಬೇಕೆಂದೂ ಸಹ ಒಪ್ಪಿತ್ತು. ಆದರೆ ಸುಮಾರು 7 ವರ್ಷಗಳು ಕಳೆದ ನಂತರವೂ ಇವತ್ತಿನವರೆಗೂ ಸರ್ಕಾರದವರು ಅವರ ಸೇವೆಯನ್ನು ಕ್ರಮಬದ್ಧಗೊಳಿಸಿಲ್ಲ. ಮತ್ತೆ ಅವರಿಗೆ ಸರ್ಕಾರಿ ನೌಕರರಿಗೆ ಸಿಕ್ಕುವಂತಹ ಮುಂಬಡ್ತಿ, ವಾರ್ಷಿಕ ಬಡ್ತಿ, ಅಲ್ಲದೆ ಪರಿಷ್ಕೃತ ವೇತನ ಶ್ರೇಣಿ ಈ ಯಾವ ಸೌಲಭ್ಯಗಳೂ ಅವರಿಗೆ ದೊರಕಿಲ್ಲ. ಅಲ್ಲದೆ ಆವು ಸರ್ಕಾರಿ ಕಾಲೇಜು ಆದ ಮೇಲೆ ಅಲ್ಲಿ ಕೆಲಸ ಮಾಡುತ್ತಿದ್ದಂತಹ ನೌಕರರು ಸುಮಾರು 5 ಜನ ನಿವೃತ್ತಿಯಾಗಿದ್ದಾರೆ. ಆ ನಿವೃತ್ತಿ ನೌಕರರಿಗೆ ಇವತ್ತಿನವರೆಗೂ ನಿವೃತ್ತಿ ವೇತನ ಸಿಕ್ಕಿಲ್ಲ ಅಲ್ಲದೆ ಆ ರೀತಿ ನಿವೃತ್ತಿಯಾಗಿರುವಂತಹ 5 ಜನರಲ್ಲಿ ಒಬ್ಬರು ತೀರಿಕೊಂಡಿದ್ದಾರೆ. ಇನ್ನುಳಿದ 4 ಜನ ಏನು ಇದ್ದಾರೆ ಅವರ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಈ ಕಷ್ಟವನ್ನು ಪರಿಹರಿಸಲು ಅಲ್ಲಿರತಕ್ಕಂತಹ ವಿದ್ಯಾರ್ಥಿಗಳು ಮತ್ತು ಇನ್ನುಳಿದ ಶಿಕ್ಷಕರು ಕೂಡಿ ಚಳುವಳಿ ಹೂಡುವಂತಹ ಪರಿಸ್ಥಿತಿಗೆ ಬಂದಿದೆ. ಆದ್ದರಿಂದ ಏನು ನಿವೃತ್ತಿಯಾಗಿದ್ದಾರೆ, ಅವರಿಗೆ ನಿವೃತ್ತಿ ವೇತನವನ್ನು ಕೂಡಲೇ ಕೊಡಬೇಕು. ಮತ್ತು ಅಲ್ಲಿ ಸೇವೆ ಮಾಡುತ್ತಿರತಕ್ಕಂತಹ ನೌಕರರನ್ನು ಕ್ರಮಬದ್ಧಗೊಳಿಸಬೇಕೆಂಬುದರ ಬಗ್ಗೆ ಸರ್ಕಾರದ ನಿಲುವು ಏನು ಎಂಬುದರ ಬಗ್ಗೆ ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಅಧ್ಯಕ್ಷರು.—ಸಂಬಂಧಪಟ್ಟ ಸಚಿವರ ಹತ್ತಿರ ಮಾಹಿತಿ ಇಲ್ಲವಂತೆ ನೋಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ.— ಬೆಳಗಾಂ ಕಾರ್ಪೊರೇಷನ್‌ನಲ್ಲಿ ಒಂದು ನಿರ್ಣಯವನ್ನು ಪಾಸ್ ಆಗಿರುವುದರ ಬಗ್ಗೆ ನಾನೊಂದು ನೋಟೀಸ್ ಅನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು.— ಅದು ಕೂಡ ನನ್ನ ಮುಂದೆ ಇದೆ. ಇದಾದ ಮೇಲೆ ನಂತರ ತೆಗೆದುಕೊಳ್ಳೋಣ.

(iv) ವಿಷಯ : ಬೆಳಗಾಂನಲ್ಲಿ ಸ್ಯಾನಿಟರಿ ಇನ್‌ಸ್ಪೆಕ್ಟರ್ ಒಬ್ಬರ ದುರ್ಮರಣದ ಬಗ್ಗೆ

ಶ್ರೀ ಜೆ.ಡಿ. ಸೋಮಪ್ಪ.— ಅದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಆಗಬಹುದು.

ಶ್ರೀ ಎಂ. ಎಸ್. ಪಾಟೀಲ್.— ಬೆಳಗಾಂನಲ್ಲಿರುವ ಆಲ್ ಇಂಡಿಯಾ ಇನ್ಸ್‌ಟಿಟ್ಯೂಟ್ ಆಫ್ ಲೋಕಲ್ ಸೆಲ್ಫ್ ಗೌರ್ನಮೆಂಟ್ ಇಲ್ಲಿ ತರಬೇತಿಯನ್ನು ಪಡೆದಂತಹ ಸ್ಯಾನಿಟರಿ ಇನ್ಸ್‌ಪೆಕ್ಟರ್ ಒಬ್ಬರು ಬೆಳಗಾಂ ನೀರು ಸರಬರಾಜು ಹೊಂಡದಲ್ಲಿ ಬಿದ್ದು ಮರಣ ಹೊಂದಿದ ದುರ್ಘಟನೆಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಅಧ್ಯಕ್ಷರು.— ಸಚಿವರ ಹತ್ತಿರ ಆದರ ಬಗ್ಗೆ ಮಾಹಿತಿ ಇಲ್ಲವಂತೆ. ಮುಂದೆ ನೋಡೋಣ.

ಶ್ರೀ ಎಂ.ಎಸ್. ಪಾಟೀಲ್.—ದೊಡ್ಡ ಅನಾಹುತವಾಗಿದೆ. ಇದರ ಬಗ್ಗೆ ಸರ್ಕಾರದ ವತಿಯಿಂದ